ಕೇಶವ ಶರ್ಮ ಕೆ.

# ಚರಿತ್ರೆ, ಅವಕಾಶ, ಕ್ರಿಯೆಗಳ ಕಥನ

ಎಂ.ಎಸ್. ವೇದಾ ಅವರ ಕಾದಂಬರಿ 'ದೊಡ್ಡತಾಯಿ' ಅನೇಕ ಕಾರಣಗಳಿಂದಾಗಿ ನಮ್ಮ ಗಮನ ಸೆಳೆಯುತ್ತದೆ. ಈ ಕಾದಂಬರಿ ಮುಖ್ಯಪಾತ್ರವಾದ 'ದೊಡ್ಡತಾಯಿ'ಯನ್ನು ಕಥಿಸುತ್ತದೆ. ಇದರಲ್ಲಿ ಅವಳು ಮಾತ್ರ ಇಲ್ಲ. ಅವಳ ಸುತ್ತ ಬೇರೆ ಬೇರೆಯಾದ ವಿಶಿಷ್ಟ ಜನರು ಇದ್ದಾರೆ. ಈ ಕಾದಂಬರಿ ವಾಸ್ತವದ ಅತ್ಯಂತ ಪ್ರಖರ ಚಿತ್ರಣವಾಗಿದೆ. ಈ ನಿಟ್ಟಿನಲ್ಲಿ ಶಿವರಾಮ ಕಾರಂತರು ಹೇಳಿದ್ದನ್ನು ಇಲ್ಲಿ ನೆನೆಯಬಹುದು. 'ನನಗೆ ಯಾವುದು ಅನುಭವಕ್ಕೆ ಬರುತ್ತದೆಯೋ ಅದನ್ನು ಮಾತ್ರವೇ ಕಾದಂಬರಿಯಲ್ಲಿ ಹೇಳಿದ್ದೇನೆ. ಉಳಿದುದು ನನಗೆ ಸಂಬಂಧಪಟ್ಟದ್ದಲ್ಲ' ಎನ್ನುವುದು ಅವರ ಧೋರಣೆಯಾಗಿತ್ತು. ಈ ದೃಷ್ಟಿಯಿಂದ ಕಾರಂತರಲ್ಲಿ ಅನುಭವ ಮತ್ತು ಕಣ್ಣಿನ ನೋಟ ಎರಡೂ ಮುಖ್ಯ. ಕಾರಂತರ ಅನಂತರ ಕೆಲವು ಲೇಖಕರು ಮಾತ್ರ ಈ ದಾರಿಯಲ್ಲಿ ನಡೆದರು. ಅನೇಕ ಲೇಖಕಿಯರು ತಾವು ಕಂಡ ವಾಸ್ತವವನ್ನು ತಮಗೆ ಅಗತ್ಯವೆನಿಸಿದ ರೀತಿಯಲ್ಲಿ ಬರೆದರು. ಈ ದೃಷ್ಟಿಯಿಂದ 'ದೊಡ್ಡತಾಯಿ' ಅತ್ಯಂತ ಮುಖ್ಯವಾದ ಪ್ರಯತ್ನ. ಇದಕ್ಕೆ ದೊಡ್ಡದಾದ ಚೌಕಟ್ಟು ಇದೆ.

ಕಾದಂಬರಿಯಲ್ಲಿ ಭಾಷೆ ಸಂವಹನದ ಭಾಗ. ಭಾಷೆಯ ಸನ್ನೆ ಕೂಡ ಸಂವಹನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದು ಬೇರೆ ಪ್ರಶ್ನೆ. 'ಹೊದ್ದುಕೊಂಡಿದ್ದ ಕಂಬಳಿಯ ಮೊಖದ ಮೇಲಿಂದ ತೆಗೆದು ಪಿಳಿ ಪಿಳಿ ಕಣ್ಣಾಡಿಸುವಾಗ ಮೆಲ್ಲನೆ ಎದೆ ಧಸಕ್ಕೆಂದಿತು. ಆಗಲೆ ಬೆಳಕರಿದು ಸ್ವಾಮಿ ಜಗತ್ತಿನ ಜೀವರಾಶಿಗಳ ಮ್ಯಾಲೆ ತನ್ನ ಕರುಣೆಯೆಂಬೋ ಕರುಣೆಯ ಕಿರಣಗಳ ಮೂಲಕ ವೂರ ತುಂಬೆಲ್ಲಾ ಚೆಲ್ಲಾಡಿ ಬಿಟ್ಟವನೆ.' (ಪು.1) ಇದು ವೇದಾ ಅವರು ಬಳಸಿದ ಭಾಷೆಯ ಕ್ರಮ. ಇದು ನಾವು ಬಳಸುವ ಶಿಷ್ಟ ಕನ್ನಡವಲ್ಲ. ಈ ಭಾಷೆ ಭಿನ್ನ ಮತ್ತು ಕಾವ್ಯಾತ್ಮಕ ಕ್ರಮದಲ್ಲಿದೆ. ಇದರ ಪ್ರಾರಂಭವೇ ನಮ್ಮನ್ನು ಸೆಳೆಯುತ್ತದೆ. ಇದಕ್ಕೆ ಪೂರಕವಾಗಿ ಮತ್ತೊಂದು ಅಂಶವನ್ನು ಹೇಳಬೇಕಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಮಹತ್ವದ ಸಾಹಿತ್ಯಿಕ ಚರ್ಚೆಗಳು ನಡೆದವು. ಸಾಹಿತ್ಯದಲ್ಲಿ ಬರುವ ವಾಸ್ತವ ಹೇಗೆ ಇದೆ ಮತ್ತು ಅದರ ಮಿತಿಗಳು ಏನು ಎನ್ನುವುದು ಆ ಚರ್ಚೆಗಳ ಪ್ರಮುಖ ಕೇಂದ್ರವಾಗಿತ್ತು. ಇದೇ ಚರ್ಚೆ ಚಿತ್ರಕಲೆ, ಸಿನಿಮಾ ವಿಮರ್ಶೆಯಲ್ಲೂ ಇತ್ತು. ಕನ್ನಡದಲ್ಲಿ ಈ ಬಗೆಯ ಚರ್ಚೆ ಇಂದಿಗೂ ಇದೆ. ಇಡೀ ಕಾದಂಬರಿಯನ್ನು ತಾತ್ವಿಕವಾಗಿ ನೋಡುವುದಾದರೆ, ಅದನ್ನು ವಾಸ್ತವ ಮತ್ತು ಅದರ ಮೇಲೆ ಆದ ವಿವಿಧ ಪರಿಣಾಮಗಳ ಕ್ರೋಡೀಕರಣ ಎಂದು ಹೇಳಬಹುದು. ಇಲ್ಲಿ ಇನ್ನೊಂದು ವಿಚಾರವನ್ನು ಉಲ್ಲೇಖಿಸಬೇಕು. 1970ರ ಅನಂತರ ಕನ್ನಡದಲ್ಲಿ ವಿವಿಧ ರೀತಿಯ ಸಾಹಿತ್ಯಕೃತಿಗಳು ಬಂದವು. ಎಲ್ಲವೂ ವಾಸ್ತವ ಅಲ್ಲ. ಅವುಗಳಲ್ಲಿ ಜಾತಿಯ ಪ್ರಶ್ನೆಗಳು ಇವೆ. ಭೂಮಿ ಮತ್ತು ಅದರ ಹಿಡುವಳಿಯ ಪ್ರಶ್ನೆಗಳು ಇವೆ. ರೈತರ ಸಮಸ್ಯೆಗಳೂ ಇವೆ. ಈ ಕಾದಂಬರಿಯಲ್ಲಿ ಬರುವ ಮೈಸೂರು ನಗರ ಕೂಡ ಅನೇಕ ವಿಚಾರಗಳನ್ನು ತೆರೆಯುತ್ತದೆ. ಕಾದಂಬರಿಯ ಮೊದಲ ಭಾಗದಲ್ಲಿ ಬರುವ ಗಂಡಸಿನ ಬಗ್ಗೆ ಬರುವ ಮಾತು ಉದ್ದೇಶಿತ. (ಪು. 9) 'ಗಂಡಸರು ಗೂಳಿಗಳ ಥರ. ಮೇಯ್ಕೊಂಡು